ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-1 , ಸಂಚಿಕೆ-2 ತ್ರೈಮಾಸಿಕ, ಏಪ್ರಿಲ್-ಜೂನ್ 2014 ಪುಟಗಳು-12



ಗೃಹಪತ್ರಿಕೆಯ ಈ ಸಂಚಿಕೆಯನ್ನು ಬೆಸ್ಕಾಂನ ಎಲ್ಲಾ ಮಹಿಳೆಯರಿಗೆ ಸಮರ್ಪಿಸುತ್ತಿದ್ದೇವೆ

- ಮಹಿಳಾ ದಿನಾಚರಣೆ
- ಪ್ರೀಪೇಡ್ ಮೀಟರ್
- ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸ್‌ದಾರರ ಷರತ್ತು

...ಇನ್ನೂ ಹಲವು ವಿಷಯಗಳು ಒಳಪುಟಗಳಲ್ಲಿ

**ವಿದ್ಯುತ್ ಉಳಿಸಿ - ಪರಿಸರ ರಕ್ಷಿಸಿ**

# ವಿಶ್ವ ಮಹಿಳಾ ದಿನಾಚರಣೆ ಸಾಂಸ್ಕೃತಿಕ ಕಾರ್ಯಕ್ರಮಗಳು

















ವಿಶ್ವ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಬೆಸ್ಕಾಂನ ಎಲ್ಲಾ ಮಹಿಳಾ ಸಿಬ್ಬಂದಿಗೆ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಸ್ಪರ್ಧೆಯ ಕೆಲ ಚಿತ್ರಗಳು ಇಲ್ಲಿವೆ.




**ಡಿ.ಕೆ. ಶಿವಕುಮಾರ್**
ಇಂಧನ ಸಚಿವರು ಹಾಗೂ
ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಕೊಠಡಿ ಸಂಖ್ಯೆ: 336, ವಿಧಾನಸೌಧ
ಬೆಂಗಳೂರು – 560 001
ದೂರವಾಣಿ ಸಂಖ್ಯೆ: 080–22258004/
080–22033496


## ಸಂದೇಶ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು 8 ಜಿಲ್ಲೆಗಳ ವ್ಯಾಪ್ತಿಯಲ್ಲಿ 83.55 ಲಕ್ಷಕ್ಕೂ ಹೆಚ್ಚಿನ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡುತ್ತಿದೆ. ಗ್ರಾಹಕರನ್ನು ತೃಪ್ತಿಪಡಿಸುವ ನಿಟ್ಟಿನಲ್ಲಿ ಬೆಸ್ಕಾಂನ ಉದ್ಯೋಗಿಗಳು ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ಇಲಾಖೆಯ ಹಲವು ಮಾಹಿತಿಗಳನ್ನು ತಿಳಿದುಕೊಳ್ಳಲು, ಆಂತರಿಕ ಪ್ರಸಾರಕ್ಕಾಗಿ ಗೃಹ ಪತ್ರಿಕೆಯ ಅಗತ್ಯವನ್ನು ಮನಗಂಡು ಈ ಪತ್ರಿಕೆಯನ್ನು ಹೊರತಂದಿರುವುದು ಸೂಕ್ತ ನಿರ್ಧಾರವಾಗಿದೆ ಮತ್ತು ಅತ್ಯಂತ ಸಂತೋಷದ ಸಂಗತಿಯಾಗಿದೆ.

ವಿದ್ಯುತ್ ಕ್ಷೇತ್ರದ ವಿನೂತನ ಯೋಜನೆಗಳು, ಸಾಧನೆಗಳು, ಪ್ರಯೋಗಗಳು, ಹೊಸ ಅನುಷ್ಠಾನಗಳು ಹಾಗೂ ಸಂಸ್ಥೆಯ ಉದ್ಯೋಗಿಗಳ ಕಾರ್ಯಚಟುವಟಿಕೆಗಳನ್ನು ಪ್ರಕಟಿಸಲು ಈ ಗೃಹಪತ್ರಿಕೆ ಸೂಕ್ತ ವೇದಿಕೆಯಾಗಲಿ ಎಂದು ಆಶಿಸುತ್ತೇನೆ.

ಈ ಸಂದರ್ಭದಲ್ಲಿ ತಮ್ಮೆಲ್ಲರಿಗೂ ಹಾಗೂ ಬೆಸ್ಕಾಂ ಸ್ನೇಹಿ ಗ್ರಾಹಕ ಬಳಗಕ್ಕೂ ಹೊಸ ಸಂವತ್ಸರದ ಹಾರ್ದಿಕ ಶುಭಾಶಯಗಳು.

(ಡಿ.ಕೆ.ಶಿವಕುಮಾರ್)



**ಶ್ರೀ ಪಿ. ರವಿಕುಮಾರ್** ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿಗಳು,
ಇಂಧನ ಇಲಾಖೆ

# ಹಾರ್ದಿಕ ಸ್ವಾಗತ

ಬೆಸ್ಕಾಂ ನೂತನ ಅಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡಿರುವ ಸನ್ಮಾನ್ಯ ಶ್ರೀ ಪಿ. ರವಿಕುಮಾರ್, ಭಾ.ಆ.ಸೇ. ಇವರಿಗೆ ಬೆಸ್ಕಾಂ ಹಾಗೂ 'ಬೆಸ್ಕಾಂ ಸ್ನೇಹಿ' ಗೃಹ ಪತ್ರಿಕೆಯ ವತಿಯಿಂದ ಆತ್ಮೀಯ ಸ್ವಾಗತ.



**ಶ್ರೀ ಪಂಕಜ್‌ಕುಮಾರ್ ಪಾಂಡೆ** ಭಾ.ಆ.ಸೇ.

# ವ್ಯವಸ್ಥಾಪಕ ನಿರ್ದೇಶಕರ ಸಂದೇಶ

ಬೇಸಿಗೆ ಕಾಲ ಅಂದರೆ, ವಿದ್ಯುತ್ ಸರಬರಾಜು ಕಂಪನಿಗಳ ಪಾಲಿಗೆ ಸಾಮರ್ಥ್ಯ ಪರೀಕ್ಷೆಯ ಕಾಲ. ಒಂದೆಡೆ, ವಿದ್ಯುತ್ ಬೇಡಿಕೆ ಇದ್ದಕ್ಕಿದ್ದಂತೆ ಹೆಚ್ಚಾದರೆ, ಮತ್ತೊಂದೆಡೆ ವಿದ್ಯುತ್ ಸರಬರಾಜಿನ ಪ್ರಮಾಣ ಇಳಿತಗೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ, ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತದೆ. ಏಪ್ರಿಲ್–ಮೇ ತಿಂಗಳು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರೀಕ್ಷೆಯ ಕಾಲ. ಜೊತೆಗೆ ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ವಿದ್ಯುತ್ ಇಲ್ಲದೆ ಜೀವಿಸುವುದು ಅಸಾಧ್ಯವಾಗಿದೆ. ಹೀಗಾಗಿ, ವಿದ್ಯುತ್ ಸರಬರಾಜಿನ ಅಡಚಣೆ ಉಂಟಾದಾಗ ಗ್ರಾಹಕರು ಅಸಮಾಧಾನಗೊಳ್ಳುವುದು ಸಹಜ. ಗ್ರಾಹಕರೊಡನೆ ನೇರ ಸಂಪರ್ಕದಲ್ಲಿರುವ ಸಂಸ್ಥೆಯ ಉದ್ಯೋಗಿಗಳು ಹೆಚ್ಚಿನ ತಾಳ್ಮೆ, ಸಹನೆಯಿಂದ ಕರ್ತವ್ಯ ನಿರ್ವಹಿಸಬೇಕು. ಗ್ರಾಹಕರನ್ನು ನಿರ್ಲಕ್ಷಿಸದೆ, ಅನುಚಿತವಾಗಿ ನಡೆದುಕೊಳ್ಳದೆ, ಪರಿಸ್ಥಿತಿಯನ್ನು ಗ್ರಾಹಕರ ಗಮನಕ್ಕೆ ತಂದು, ಶೀಘ್ರವಾಗಿ ಅವರ ಸಮಸ್ಯೆಯನ್ನು ಬಗೆಹರಿಸಲು ಮುಂದಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ, ಗ್ರಾಹಕರ ಹಿತದೃಷ್ಟಿಯಿಂದ ಸೇವಾಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳದ ಕಂಪನಿಗಳು ಯಶಸ್ವಿ ಕಾರ್ಯನಿರ್ವಹಿಸುವುದು ಅಸಾಧ್ಯ. ಗ್ರಾಹಕರ ಸಮಸ್ಯೆಯನ್ನು ಶಾಂತಚಿತ್ತವಾಗಿ ಆಲಿಸಿ ಶೀಘ್ರವಾಗಿ ಬಗೆಹರಿಸಿ ಬೆಸ್ಕಾಂ ಯಶಸ್ವಿ ಪಥದಲ್ಲಿ ಸಾಗುವಂತೆ ಸಂಸ್ಥೆಯೊಂದಿಗೆ ಕೈಜೋಡಿಸಲು ಕೋರುತ್ತೇನೆ.

# ಇಂಧನ ಇಲಾಖೆಗೆ ಹಂಚಿಕೆಯಾದ ಬಜೆಟ್ ಮುಖ್ಯಾಂಶಗಳು

- ಸೌರಶಕ್ತಿ ಯೋಜನೆಗಳಿಗೆ 20 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ಸರ್ಕಾರವು ರೈತರ ನೀರಾವರಿ ಪಂಪುಸೆಟ್ಟುಗಳು ಮತ್ತು ಭಾಗ್ಯಜ್ಯೋತಿ/ಕುಟೀರಜ್ಯೋತಿ ಸ್ಥಾಪನಗಳಿಗೆ ಉಚಿತ ವಿದ್ಯುತ್ ಸರಬರಾಜು ಮಾಡಲು 2014–15ನೇ ಸಾಲಿಗೆ 6200 ಕೋಟಿ ರೂ.ಗಳ ಸಹಾಯಧನ ಒದಗಿಸಲಾಗುವುದು.
- ದಿನಾಂಕ 31.03.2014ರ ಅಂತ್ಯಕ್ಕೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತರ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಉಳಿಯಲಿರುವ ಬಾಕಿ ಎಲ್ಲಾ ನೀರಾವರಿ ಪಂಪುಸೆಟ್ಟುಗಳಿಗೆ 2014–15ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.
- ವಿದ್ಯುತ್ ಸರಬರಾಜು ಕಂಪನಿಗಳಿಗೆ 2014–15ರಲ್ಲಿ 750 ಕೋಟಿ ರೂ.ಗಳನ್ನು ಬಂಡವಾಳವನ್ನಾಗಿ ನೀಡಲಾಗುವುದು. ಈ ಕಂಪನಿಗಳಲ್ಲಿ ಈ ಕೆಳಕಂಡಂತೆ ಯೋಜನೆಗಳನ್ನು ಅನುಷ್ಠಾನ ಮಾಡಲಾಗುವುದು.
- ಪ್ರತಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಬರುವ 50 ಗ್ರಾಮಗಳಲ್ಲಿ ಪ್ರತಿ ಗ್ರಾಮಕ್ಕೆ 5 ಲಕ್ಷ ರೂ.ಗಳ ವೆಚ್ಚದಲ್ಲಿ ಎಲ್.ಇ.ಡಿ. ಸೌರಶಕ್ತಿ ಬೀದಿ ದೀಪಗಳ ವಿತರಣೆ.
- ರಾಜ್ಯದ 10 ಮಹಾನಗರ ಪಾಲಿಕೆ ಪ್ರದೇಶದಲ್ಲಿ 50 ಕೋಟಿ ರೂ.ಗಳ ವೆಚ್ಚದಲ್ಲಿ ವಿತರಣಾ ಮೂಲಸೌಕರ್ಯ ಉನ್ನತೀಕರಣ.
- ಎಚ್.ವಿ.ಡಿ.ಎಸ್. ಯೋಜನೆಯಡಿ ಪ್ರತಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಹೆಚ್ಚುವರಿಯಾಗಿ ಎರಡು ಉಪವಿಭಾಗಗಳ ಸೇರ್ಪಡೆ.
- ಸ್ಮಾರ್ಟ್ ವಿದ್ಯುತ್ ಜಾಲ ಮತ್ತು ಸ್ಮಾರ್ಟ್ ಮಾಪಕ ಯೋಜನೆ 98 ನಗರಗಳಲ್ಲಿ ಅನುಷ್ಠಾನ.
- ಪ್ರಸರಣಾ ವಲಯದಲ್ಲಿ ಹಸಿರು ವಿದ್ಯುತ್ ಕಾರಿಡಾರ್ ಯೋಜನೆ ಕೆ.ಪಿ.ಟಿ.ಸಿ.ಎಲ್. ಹಾಗೂ ಕೆ.ಎಫ್. ಡಬ್ಲ್ಯು.ನೆರವಿನಿಂದ ಅನುಷ್ಠಾನ.
- 2014–15ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆ 11693 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

# ಸಂಪಾದಕೀಯ...



ಆತ್ಮೀಯರೆ,

ಬೆಸ್ಕಾಂ ಸ್ನೇಹಿ ಗೃಹ ಪತ್ರಿಕೆ-ಯ ಎರಡನೆಯ ಸಂಚಿಕೆಯನ್ನು ನಿಮ್ಮ ಕೈಗಿಡುವಾಗ ಹೊಸ ಸಂವತ್ಸರದ ಆಗಮನವಾಗಿದೆ. ಮಾರ್ಚ್ 31ರಂದು ಯುಗಾದಿ ಹಬ್ಬದ ಬೇವು-ಬೆಲ್ಲವನ್ನು ಸವಿದು ಹೊಸ ಸಂವತ್ಸರಕ್ಕೆ ಕಾಲಿಟ್ಟಿರುವ ತಮಗೆಲ್ಲರಿಗೂ ಹಾರ್ದಿಕ ಶುಭಾಶಯಗಳು. ಜಯನಾಮ ಸಂವತ್ಸರ ನಮ್ಮೆಲ್ಲರಿಗೂ ಎಲ್ಲ ಕ್ಷೇತ್ರಗಳಲ್ಲೂ ಜಯದ ಹಾದಿಯನ್ನೇ ತೋರಿಸಲಿ ಎಂಬುದು ನನ್ನ ಶುಭ ಹಾರೈಕೆ.

ಈ ಬಾರಿಯ ಸಂಚಿಕೆಯನ್ನು ಮಹಿಳೆಯರಿಗೆ ಸಮರ್ಪಿಸಿದ್ದೇವೆ. ಕಾರಣ, ಪ್ರತಿ ವರ್ಷ ಮಾರ್ಚ್ 8ರಂದು ವಿಶ್ವದಾದ್ಯಂತ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರ ಕಷ್ಟ-ಸುಖಗಳ ಬಗ್ಗೆ ಬಾಯಿ ಮಾತಿನಲ್ಲಿ ಒಂದೆರಡು ಹೊಗಳಿಕೆಗಳನ್ನು ಹೇಳಿ ಕಾರ್ಯಕ್ರಮಕ್ಕೆ ಮುಕ್ತಾಯ ಹಾಡುತ್ತೇವೆ.

ಪ್ರತಿ ಬಾರಿಯೂ ಇಂತಹ "ಲಿಪ್ ಸಿಂಪಥಿ" ಕಾರ್ಯಕ್ರಮಗಳೇ ಎಲ್ಲೆಡೆ ನಡೆಯುತ್ತವೆ. ಹೀಗಾಗಬಾರದು.

ಮಹಿಳೆಯರ ಬಗೆಗಿನ ನಿಜವಾದ ಕಾಳಜಿ ವ್ಯಕ್ತವಾಗಬೇಕು. ಇಂದಿನ ಸಮಾಜದಲ್ಲಿ ಪುರುಷರಿಗೆ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಎದುರಿಸುತ್ತಿರುವ ಕಠಿಣ ಸವಾಲುಗಳ ಬಗ್ಗೆ ಚರ್ಚೆಯಾಗಬೇಕು. ಆ ಮೂಲಕ ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಾಮಾಣಿಕ ಪ್ರಯತ್ನ ಎಲ್ಲ ಕ್ಷೇತ್ರಗಳಲ್ಲೂ ಆಗಬೇಕಾಗಿದೆ.

ಪುರುಷ ಪ್ರಧಾನ ಸಮಾಜದಲ್ಲಿ ತಾಯಿಯಾಗಿ, ಪತ್ನಿಯಾಗಿ, ಸಹೋದರಿಯಾಗಿ ವಿವಿಧ ಸ್ಥರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಒಂದೆರಡಲ್ಲ ಹಲವಾರು. ಅದರಲ್ಲೂ ದುಡಿಯುವ ಮಹಿಳೆಯರು ಎದುರಿಸುತ್ತಿರುವ ಸವಾಲುಗಳಿಗೆ ಇತಿ-ಮಿತಿಯೇ ಇಲ್ಲದಂತಾಗಿದೆ. ಈ ಆಧುನಿಕ ಸಮಾಜದಲ್ಲಿ, ಮನೆಯಲ್ಲಿ ಪತಿ, ಹಿರಿಯರು, ಮಕ್ಕಳನ್ನು ಸಂತೈಸುವುದರಿಂದ ಹಿಡಿದು, ಕಚೇರಿಯಲ್ಲಿ ಒತ್ತಡದ ಮಧ್ಯೆ ಕಾರ್ಯನಿರ್ವಹಿಸುವುದು ಒಂದು ಸವಾಲೇ ಸರಿ.

ಸಮಾಜದಲ್ಲಿ ಮಹಿಳೆಯರನ್ನು ಗೌರವಿಸುವುದು ಮೊದಲ ಆದ್ಯತೆಯಾಗಬೇಕು ಹಾಗೂ ಎಲ್ಲಾ ರಂಗಗಳಲ್ಲೂ ದುಡಿಯುವ ಮಹಿಳೆಯರನ್ನು ಗುರುತಿಸಿ ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಬೇಕೆನ್ನುವುದು ಆಶಯ. ಆಗ ಮಾತ್ರ ಮಹಿಳಾ ದಿನಾಚರಣೆಗೆ ನಿಜವಾದ ಅರ್ಥ ಪ್ರಾಪ್ತಿಯಾಗಲು ಸಾಧ್ಯ.

ಹೊಸ ಸಂವತ್ಸರದ ಆಗಮನದ ಜೊತೆಗೆ ಏಪ್ರಿಲ್ 1ರಿಂದ ಹೊಸ ಆರ್ಥಿಕ ವರ್ಷ ಕೂಡ ಆರಂಭವಾಗಿದೆ. ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಇಂಧನ ಇಲಾಖೆಗೆ ಸಂಬಂಧಿಸಿದಂತೆ ಹಲವಾರು ಹೊಸ ಯೋಜನೆಗಳನ್ನು ಪ್ರಕಟಿಸಿದೆ. ಅವುಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸುವ ಜವಾಬ್ದಾರಿ ನಮ್ಮದಾಗಿದೆ.

ವೈಯಕ್ತಿಕವಾಗಿ ಒಬ್ಬ ವ್ಯಕ್ತಿಯು ಜೀವನಪಥದಲ್ಲಿ ಮುನ್ನಡೆಯುತ್ತಿರುವಾಗ ಆತನ ಹಿಂದಿನ ವರ್ಷಗಳ ಆಗುಹೋಗುಗಳ ಬಗ್ಗೆ ಮೆಲುಕು ಹಾಕಿ ಭವಿಷ್ಯಕ್ಕೆ ಸೂಕ್ತ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುವುದು ಒಂದು ಸಾಮಾನ್ಯ ಪ್ರಕ್ರಿಯೆ. "ಬೆಸ್ಕಾಂ" ಸಹ ಅದರಂತೆ ಕ್ರಮಿಸಿದ ದೂರ ಮತ್ತು ಆ ಸಂದರ್ಭದಲ್ಲಿ ಘಟಿಸಿದ ಗುಣಾತ್ಮಕ ಋಣಾತ್ಮಕ ಅಂಶಗಳನ್ನು ಪರಿಗಣಿಸಿಕೊಂಡು ಮುಂಬರುವ ದಿನಗಳಲ್ಲಿ ಸೂಕ್ತ ಯೋಜನೆಗಳನ್ನು ಹಮ್ಮಿಕೊಂಡು ತನ್ನ ಧ್ಯೇಯದೆಡೆಗೆ ತಲುಪಬೇಕಾಗಿದೆ. ಈ ದಿಸೆಯಲ್ಲಿ ನಾವೆಲ್ಲರೂ ಒಂದಾಗಿ ಕಾರ್ಯೋನ್ಮುಖರಾಗೋಣ ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

## ಹೆಣ್ಣು

ಹೆಮ್ಮೆಯ ಮಗಳಾಗಿ ತಂದೆ-
ತಾಯಿಯನ್ನು ಪೂಜಿಸುವವಳು ಹೆಣ್ಣು,

ಮುದ್ದಿನ ತಂಗಿಯಾಗಿ ಅಣ್ಣನ
ಶ್ರೇಯಸ್ಸನ್ನು ಬಯಸುವವಳು ಹೆಣ್ಣು,

ಆಸರೆಯ ಅಕ್ಕನಾಗಿ ತಮ್ಮಂದಿರನ್ನು ಗುರಿ
ಮುಟ್ಟಿಸುವವಳು ಹೆಣ್ಣು,

ಉದ್ಯಮಿಯಾಗಿ ಸಾಧನೆಯನ್ನು
ಮಾಡುವವಳು ಹೆಣ್ಣು,

ಪ್ರೀತಿಯ ಮನೆಯೊಡತಿಯಾಗಿ
ಸಂಸಾರವನ್ನು ನಿಭಾಯಿಸುವವಳು ಹೆಣ್ಣು,

ಬೆಲೆಕಟ್ಟಲಾಗದ ತಾಯಾಗಿ ಮಕ್ಕಳನ್ನು
ಮಮತೆಯ ಮಡಿಲಲ್ಲಿ ತೇಲಿಸುವವಳು
ಹೆಣ್ಣು,

ಮೂಢನಂಬಿಕೆಗಳಿಗೆ ಗುರಿಯಾಗಿ,
ನೋವನ್ನು ನಗುನಗುತಲಿ ಅನುಭವಿಸುವ
ಅನಿರ್ವಾಯತೆಯಲ್ಲಿರುವವಳು ಹೆಣ್ಣು,

ಸಹನೆಯ ಮೂರ್ತಿ ಹೆಣ್ಣು,

ಕ್ಷಮಯಾಧರಿತ್ರಿ ಹೆಣ್ಣು,

ಸ್ಫೂರ್ತಿಯು ಹೆಣ್ಣು,

ಪ್ರತಿಭೆಯ ಸ್ವರೂಪ ಹೆಣ್ಣು,

ಸೂರ್ಯೋದಯದಿಂದ ಹಿಡಿದು ಚಂದ್ರ
ಮರಳುವವರೆಗೂ ಪ್ರತಿ ಹೆಜ್ಜೆ ಇಡಲು
ಬೇಕು ಹೆಣ್ಣು.....

ಜೀವನವೆಂಬ ನಾಟಕದಲ್ಲಿ: "ಗೆಳತಿಯ"
ಪಾತ್ರಕ್ಕೆ ಬೇಕೆನ್ನುವರು ಹೆಣ್ಣು,

"ಒಡತಿಯ" ಪಾತ್ರಕ್ಕೆ ಬೇಕೆನ್ನುವರು
ಹೆಣ್ಣು,

"ತಾಯಿಯ" ಪಾತ್ರಕ್ಕೆ ಬೇಕೆನ್ನುವರು
ಹೆಣ್ಣು,

"ಮಗಳ" ಪಾತ್ರಕ್ಕೆ ಏಕೆ ಬೇಡ ಹೆಣ್ಣು????

ಏಕೆ ನಡೆಯುತಿದೆ ಹೆಣ್ಣು ಮಗುವಿನ
ಭ್ರೂಣ ಹತ್ಯೆ????????? ನಿಲ್ಲಿಸಿ, ನಿಲ್ಲಿಸಿ
ಈ ಘೋರವಾದ ಕೊಲೆ.

ದಯವಿಟ್ಟು ಬದುಕಲು ಬಿಡಿ, ಈ ದಾರಿ
ದೀಪವಾಗಿರುವ ಹೆಣ್ಣನ್ನು.

**ಹೆಚ್.ಪಿ.ಶೈಲ,**
ಸ.ಇಂ (ವಿ) ನಿಗಮ ಕಛೇರಿ

# ಮಹಿಳಾ ದಿನಾಚರಣೆ

ಬೆಸ್ಕಾಂ ಸ್ನೇಹಿ ತ್ರೈಮಾಸಿಕ ಪತ್ರಿಕೆಯ ಎರಡನೆಯ ಸಂಚಿಕೆಯನ್ನು ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ, ಸಂಸ್ಥೆಯ ಪ್ರತಿಯೊಬ್ಬ ಮಹಿಳಾ ಉದ್ಯೋಗಿಗೆ ಸಮರ್ಪಿಸಲಾಗಿದೆ. ಪ್ರತಿ ವರ್ಷ ಮಾರ್ಚ್ 8ರಂದು ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಸಾಮಾನ್ಯವಾಗಿ, " ಹ್ಯಾಪಿ ಉಮನ್ಸ್ ಡೇ " ಅಂತ ಶುಭ ಕೋರಿದಾಗ "ಥ್ಯಾಂಕ್ಯೂ" ಹೇಳಿ ಈ ಆಚರಣೆಯನ್ನು ಪೂರ್ಣಗೊಳಿಸುತ್ತೇವೆ. ಆದರೆ ಈ ಆಚರಣೆಯ ಇತಿಹಾಸ ಹೆಚ್ಚಿನ ಜನರಿಗೆ ತಿಳಿದಿಲ್ಲ.




ಮಹಿಳಾ ದಿನಾಚರಣೆಯ ಇತಿಹಾಸ ಆರಂಭವಾಗಿದ್ದು 18 ನೇ ಶತಮಾನದಲ್ಲಿ. ಅಮೆರಿಕಾದ ಜವಳಿ ಕ್ಷೇತ್ರದಲ್ಲಿ ಕೆಲಸಕ್ಕಿದ್ದ ಲಕ್ಷಾಂತರ ಮಹಿಳೆಯರಿಗೆ ಸೂಕ್ತ ಸ್ಥಾನಮಾನ, ಆದಾಯ ನೀಡದೆ ಶೋಷಣೆ ಮಾಡುತ್ತಿದ್ದ ಕಾಲವದು. ಈ ಶೋಷಣೆಯ ವಿರುದ್ಧ ಸಿಡಿದೆದ್ದ ಅಸಂಖ್ಯಾತ ಮಹಿಳೆಯರು ಒಗ್ಗಟ್ಟಾಗಿ ಪ್ರತಿಭಟನೆ ಆರಂಭಿಸಿದರು. ಈ ಪ್ರತಿಭಟನೆಯು ಆರಂಭವಾದದ್ದು 1857ರ ಮಾರ್ಚ್ 8ರಂದು. ವಸಾಹತುಶಾಹಿಗಳ ಪ್ರಭಾವದಿಂದ ಈ ಹೋರಾಟ ವಿಫಲಗೊಂಡಿತು.

ಹೋರಾಟ ಮನೋಭಾವದ ಮಹಿಳೆಯರು ಛಲದಿಂದ ಎರಡು ವರ್ಷಗಳ ನಂತರ ಪುನಃ ಒಗ್ಗಟ್ಟಾಗಿ ಮೊಟ್ಟಮೊದಲ ಮಹಿಳಾ ಸಂಘಟನೆಯನ್ನು (ಯೂನಿಯನ್) ಸ್ಥಾಪಿಸಿದರು. ಕಾಕತಾಳೀಯವೆಂದರೆ, ಈ ಸಂಘಟನೆಯೂ ಸಹ ಮಾರ್ಚ್ ತಿಂಗಳಿನಲ್ಲೇ ಸ್ಥಾಪಿತವಾಯಿತು. ಕೆಲ ವರ್ಷಗಳ ಕಾಲ ನಡೆದ ಮಹಿಳೆಯರ ಈ ಸಂಘಟಿತ ಹೋರಾಟಕ್ಕೆ ಸರ್ಕಾರವು ಮಾನ್ಯತೆ ನೀಡಿತು. ಅಂದು, ಆಡಳಿತ ನಡೆಸುತ್ತಿದ್ದ ಸೋಶಿಯಲಿಸ್ಟ್ ಪಾರ್ಟಿಯು ಫೆಬ್ರವರಿ ತಿಂಗಳ ಕೊನೆಯ ಭಾನುವಾರದಂದು "ಮಹಿಳಾ ದಿನ" ವೆಂದು ಘೋಷಿಸಿತು. ಅಮೆರಿಕಾ ದೇಶದ ಮಹಿಳೆಯರ ಈ ಹೋರಾಟದ ಸ್ಫೂರ್ತಿಯನ್ನು ಪಡೆದ ಇತರ ದೇಶಗಳ ಮಹಿಳೆಯರು ಒಂದಾಗಿ ಸಂಘಟನೆಯನ್ನು ರಚಿಸಿ ಅನ್ಯಾಯದ ವಿರುದ್ಧ ಸಿಡಿದೇಳಲು ಪ್ರಾರಂಭಿಸಿದರು. ಇದೆಲ್ಲದರ ನಡುವೆ ವಿವಿಧ ದೇಶಗಳಲ್ಲಿ ವಿವಿಧ ದಿನಗಳಂದು ಮಹಿಳಾ ದಿನಾಚರಣೆಯನ್ನು ಆಚರಿಸಲು ಪ್ರಾರಂಭಿಸಿದರು.

1910ರ ಆಗಸ್ಟ್ ತಿಂಗಳಿನಲ್ಲಿ ಕೋಪನ್‌ಹೇಗನ್‌ನಲ್ಲಿ ಪ್ರಪ್ರಥಮ ಅಂತರ ರಾಷ್ಟ್ರೀಯ ಮಹಿಳಾ ಸಮಾಲೋಚನಾ ಸಮಾವೇಶವನ್ನು ಆಯೋಜಿಸಲಾಯಿತು. ಈ ಸಮಾವೇಶದಲ್ಲಿ ಪಾಲ್ಗೊಂಡ 17 ದೇಶಗಳ 100ಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು, ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಒಂದೇ ದಿನಾಂಕದಂದು ಆಚರಿಸಲು ಅಭಿಪ್ರಾಯ ವ್ಯಕ್ತಪಡಿಸಿದರು. ಹೀಗಾಗಿ, ವಿವಿಧ ದೇಶಗಳಲ್ಲಿ ವಿವಿಧ ದಿನಗಳಂದು ಆಚರಿಸುತ್ತಿದ್ದ ಮಹಿಳಾ ದಿನಾಚರಣೆಯನ್ನು ಮಾರ್ಚ್ 8ರಂದು ಆಚರಿಸುವುದೆಂದು ನಿರ್ಧಾರವಾಗಿ, ಅಂದಿನಿಂದ ಪ್ರತಿ ವರ್ಷ ಮಾರ್ಚ್ 8ರಂದು ಮಹಿಳಾ ದಿನಾಚರಣೆಯನ್ನು ಆಚರಿಸುವ ಸಂಪ್ರದಾಯ ಪ್ರಾರಂಭಗೊಂಡಿತು.

# ಸ್ಮೈಲಿ ಬಲ್ಬ್

ಸಾಮಾನ್ಯವಾಗಿ ನಾವು ದುಂಡಗಿನ ಅಥವಾ ಉದ್ದವಾದ ಸುರುಳಿಯಾಕಾರದ ಸಿ.ಎಫ್.ಎಲ್. ಬಲ್ಬುಗಳನ್ನು ನೋಡಿದ್ದೇವೆ. ಆದರೆ, ಇದೀಗ ಫಿಲಿಪ್ಸ್ ಕಂಪೆನಿಯು ಚಪ್ಪಟೆ ಆಕಾರದ 60 ವ್ಯಾಟ್‌ನ ಬಲ್ಬನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಬಲ್ಬ್‌ನ ಹೆಸರು ಸ್ಮೈಲಿ. ಇದರಲ್ಲೇನು ವಿಶೇಷ ಎನಿಸುವುದೇ? ಈ ಚಪ್ಪಟೆ ಆಕಾರದ ಬಲ್ಬ್ 23 ವರ್ಷ ಬಾಳಿಕೆ ಬರುತ್ತದೆ. ಸದ್ಯಕ್ಕೆ ಅಮೆರಿಕಾ ಮಾರುಕಟ್ಟೆಯಲ್ಲಿ ಲಭ್ಯವಿರುವ ಈ ಸ್ಮೈಲಿ ಬಲ್ಬ್‌ನ ಬೆಲೆ ರೂ.600/. ಅಂದಹಾಗೆ, ಇದು ಎಲ್.ಇ.ಡಿ. ಬಲ್ಬ್ ಆಗಿದ್ದು, ಇತರ ಬಲ್ಬ್‌ಗಳಂತೆ ಒಡೆಯುವ ಸಾಧ್ಯತೆ ಕಡಿಮೆ.

ಹ್ಯಾಲೋಜೆನ್ ಬಲ್ಬ್‌ಗಳು 1 ಸಾವಿರ ಗಂಟೆ ಬಾಳಿಕೆ ಬಂದರೆ, ಎಲ್.ಇ.ಡಿ. ಬಲ್ಬ್‌ಗಳು 10 ಸಾವಿರ ಗಂಟೆ ಬಾಳಿಕೆ ಬರುತ್ತವೆ ಮತ್ತು ಶೇಕಡಾ 85ರಷ್ಟು ವಿದ್ಯುತ್ ಉಳಿತಾಯ ಮಾಡುತ್ತವೆ ಎಂದು ಈ ಬಲ್ಬನ್ನು ತಯಾರಿಸಿ ಪರೀಕ್ಷಿಸಿರುವ ಡಚ್ ಕಂಪೆನಿ ತಿಳಿಸಿದೆ.

